ದಿನಾಂಕ 22-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಎಂ.ಎಂ.ಎಂ ವಕೀಲರಿಂದಃ</u>**

18. ದಾವಾ ಆಸ್ತಿಯು ವಾದಿಯ ಮಾಲಿಕತ್ವಕ್ಕೆ ಮತ್ತು ಆಕೆಯ ಸ್ವಾಧೀನದಲ್ಲಿ ಇರುವ ಸ್ವತ್ತು ಎಂದರೆ ಸಾಕ್ಷಿಯು ಮೊದಲಿಗೆ ಆಕೆಯೇ ಮಾಲೀಕಳಿದ್ದು, ನಂತರದಲ್ಲಿ ಅದನ್ನು ನನಗೆ ಭಕ್ಷೀಸು ನೀಡಿದ ಪ್ರಕಾರ ನಾನೇ ಮಾಲೀಕ ಮತ್ತು ಕಬ್ಜಾದಾರನು ಇರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಹಳೇಯ ಮನೆ ಇದ್ದು, ಅದು ಬಿದ್ದು ಹಾಳಾಗುವ ಸ್ಥಿತಿಯಲ್ಲಿ ಇತ್ತು ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯು ಹೊಸದಾಗಿ ಮನೆಯನ್ನು ಕಟ್ಟಬೇಕೆಂದು ನಿರ್ಣಯಿಸಿದ್ದು, ಆದರೆ ಹಣಕಾಸಿನ ಮುಗ್ಗಟ್ಟು ಇದ್ದ ಕಾರಣಕ್ಕೆ ಆಕೆಯು ಪ್ರಸ್ತುತ ಮಗಳ ಮನೆಯಲ್ಲಿ ವಾಸವಿದ್ದಾಳೆ ಎಂದರೆ ಸರಿಯಲ್ಲ.

19. 2014 ರಲ್ಲಿ ದಾವಾ ಆಸ್ತಿಯಲ್ಲಿ ಹೊಸದಾಗಿ ಮನೆಯನ್ನು ಕಟ್ಟಲು ವಾದಿಯು ನನ್ನ ಬಳಿ ಬಂದು ಹಣದ ಸಹಾಯ ಮಾಡುವಂತೆ ಕೇಳಿದ್ದಳು ಎಂದರೆ ಸರಿಯಲ್ಲ. ಆಗ ನಾನು ದಾವಾ ಆಸ್ತಿಯನ್ನು ಬ್ಯಾಂಕಿನಲ್ಲಿ ಅಡಮಾನ ಮಾಡಿಸಿ ಸಾಲವನ್ನು ಕೊಡಿಸುವುದಾಗಿ ಆಕೆಗೆ ನಂಬಿಸಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಾಲವನ್ನು ಪಡೆಯಲು ಅಡಮಾನ ಮಾಡಬೇಕು ಎಂದು ಆಕೆಯನ್ನು ನಂಬಿಸಿ ಉಪನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ, ಆಕೆಗೆ ಮರಳು ಮಾಡಿ ಮೋಸದ ಭಕ್ಷೀಸು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾಖಲೆಯನ್ನು ಉಪನೋಂದಣಾಧಿಕಾರಿ ಗಳ ಕಛೇರಿಯಲ್ಲಿ ನೋಂದಾಯಿಸಿದ ನಂತರ ವಾದಿಯು ನನ್ನ ಬಳಿ ಹಲವಾರು ಬಾರಿ ಬಂದು ಸಾಲವನ್ನು ಕೊಡಿಸಿಲ್ಲ ಎಂದು ದುಂಬಾಲು ಬಿದ್ದಾಗ ಒಂದಲ್ಲ ಒಂದು ಸುಳ್ಳು ಕಾರಣವನ್ನು ನೀಡಿ ಆಕೆಗೆ ಯಾವುದೇ ಸಾಲವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವರ್ತನೆಯಿಂದ ಅನುಮಾನಗೊಂಡ ವಾದಿಯು ಸಂಬಂಧಪಟ್ಟ ಉಪನೋಂದಣಾಧಿಕಾರಿಗಳ ಕಛೇರಿಗೆ ಹೋಗಿ ದಾಖಲೆಗಳನ್ನು

ತೆಗೆಸಿದಾಗ ನಾನು ಮೋಸದಿಂದ ಬರೆದುಕೊಂಡ ಭಕ್ಷೀಸು ಪತ್ರದ ಬಗ್ಗೆ ಆಕೆಗೆ ತಿಳಿದು ಬಂದಿರುತ್ತದೆ ಎಂದರೆ ಸಾಕ್ಷಿಯು ವಾದಿಯೇ ವೈಯಕ್ತಿಕವಾಗಿ ಬರೆದು ಆತ್ಮ ಸಂತೋಷದಿಂದ ಭಕ್ಷೀಸು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯೇ. ವೈಯಕ್ತಿಕ ಮತ್ತು ಆತ್ಮ ಸಂತೋಷದಿಂದ ನಿ.ಪಿ-6 ರ ಭಕ್ಷೀಸು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-6 ರ ಭಕ್ಷೀಸು ಪತ್ರವನ್ನು ವಾದಿಗೆ ನಂಬಿಸಿ ಮೋಸದಿಂದ ಬರೆಸಿಕೊಂಡಿರುವುದರಿಂದ ಅದು ಊರ್ಜಿತವಲ್ಲ ಮತ್ತು ದಾವಾ ಆಸ್ತಿಯ ಮೇಲೆ ನನಗೆ ಹಕ್ಕು ಹಸ್ತಾಂತರವಾಗುವುದಿಲ್ಲ ಎಂದರೆ ಸರಿಯಲ್ಲ.

20. ವಾದಿಯು ಭಕ್ಷೀಸು ಪತ್ರವನ್ನು ಯಾವ ದಿನಾಂಕದಂದು ಬರೆದು ಕೊಟ್ಟಿರುತ್ತಾರೆಂದು ನೆನಪಿಲ್ಲ. ಭಕ್ಷೀಸು ಪತ್ರದ ಮುದ್ರಾಂಕ ಶುಲ್ಕ ಮತ್ತು ಶುಲ್ಕವನ್ನು ಯಾವ ದಿನಾಂಕದಂದು ಸಲ್ಲಿಸಿರುತ್ತೇನೆ ಎಂದು ಗೊತ್ತಿಲ್ಲ. ವಾದಿಯು ಭಕ್ಷೀಸು ಪತ್ರವನ್ನು ಬರೆದುಕೊಡುವ ದಿನಾಂಕದಂದು ಉಪನೋಂದಣಾಧಿಕಾರಿಗಳ ಕಛೇರಿಗೆ ಬಂದಿದ್ದನ್ನು ಹೊರತುಪಡಿಸಿ ಅದರ ಪೂರ್ವದಲ್ಲಿ ನನ್ನ ಬಳಿ ಬಂದಿರಲಿಲ್ಲ. ಮುದ್ರಾಂಕ ಶುಲ್ಕವನ್ನು ಯಾರು ತುಂಬಿರುತ್ತಾರೆಂದು ನೆನಪಿಲ್ಲ. ದಾನ ಪತ್ರವನ್ನು ಬರೆಯಲು ಬೇಕಾದ ದಸ್ತಾವೇಜು ಹಾಳೆಗಳನ್ನು ಯಾರು ತಂದಿರುತ್ತಾರೆಂದು ನೆನಪಿಲ್ಲ. ದಾನ ಪತ್ರವನ್ನು ಚಂದಾಪುರ ರವರು ಬರೆದಿರುತ್ತಾರೆ. ದಾನ ಪತ್ರವನ್ನು ಬರೆದು ಕೊಡಲು ವಾದಿಯು ಕಲಕೊಪ್ಪ ಗ್ರಾಮದಿಂದ ಬಂದಿರುತ್ತಾರೆ. ಯಾವ ಸಮಯಕ್ಕೆ ಆಕೆ ಉಪನೋಂದಣಾಧಿ ಕಾರಿಗಳ ಕಛೇರಿಗೆ ಬಂದಿರುತ್ತಾರೆಂದು ನೆನಪಿಲ್ಲ. ಆಕೆಯೊಂದಿಗೆ ಆಕೆಯ ಮಗಳು ಬಂದಿದ್ದು, ಜೊತೆಗೆ ಸಮಾಜದ 4-5 ಜನರು ಬಂದಿದ್ದರು. ವಾದಿಯು ಉಪನೋಂದಣಾಧಿಕಾರಿಗಳ ಕಛೇರಿಗೆ ಬರುವ ಪೂರ್ವದಲ್ಲಿಯೇ ನಾನು ಹಾಜರಿದ್ದೆ.

21. ವಾದಿಯು ಉಪನೋಂದಣಾಧಿಕಾರಿಗಳ ಕಛೇರಿಗೆ ಬಂದ ನಂತರ ದಸ್ತಾವೇಜು ಬರಹಗಾರರಾದ ಚಂದಾಪುರ ರವರ ಹತ್ತಿರ ಹೋಗಿರುತ್ತೇವೆ. ಅವರ ಬಳಿ

ಎಷ್ಟು ಗಂಟೆಗೆ ಹೋಗಿರುತ್ತೇವೆ ಎಂದು ನೆನಪಿಲ್ಲ. ದಾನ ಪತ್ರವನ್ನು ಎಷ್ಟು ಗಂಟೆಗೆ ಬರೆಯಲು ಪ್ರಾರಂಭಿಸಲಾಗಿದೆ ಎಂದು ನನಗೆ ನೆನಪಿಲ್ಲ. ದಾನ ಪತ್ರವನ್ನು ಬರೆದು ಮುಗಿಸಿದಾಗ ಸಮಯ ಎಷ್ಟು ಆಗಿತ್ತು ಎಂದು ನೆನಪಿಲ್ಲ. ದಾನ ಪತ್ರವನ್ನು ನೋಂದಾಯಿಸಿದಾಗ ಎಷ್ಟು ಸಮಯ ಆಗಿತ್ತು ಎಂದು ನೆನಪಿಲ್ಲ. ಸಾಕ್ಷಿ ಮುಂದುವರೆದು ಬಹಳಷ್ಟು ದಿನಗಳು ಕಳೆದಿರುವುದರಿಂದ ಸಮಯ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

22. ದಾನ ಪತ್ರಕ್ಕೆ ಸಹಿಗಳನ್ನು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಮಾಡಿರುತ್ತೇವೆ. ದಾನ ಪತ್ರಕ್ಕೆ ಮೊದಲಿಗೆ ಯಾರು ಸಹಿ ಮಾಡಿರುತ್ತಾರೆ ಎಂದು ನೆನಪಿಲ್ಲ. ದಾನ ಪತ್ರಕ್ಕೆ ನಾನು ಮತ್ತು ವಾದಿಯು ಸಹಿ ಮಾಡಿದ ನಂತರ ಸಾಕ್ಷಿದಾರರು ಯಾವ ಸಮಯಕ್ಕೆ ಸಹಿ ಮಾಡಿರುತ್ತಾರೆ ಎಂದು ನೆನಪಿಲ್ಲ. ದಾನ ಪತ್ರವನ್ನು ವಾದಿಯು ಬರೆದುಕೊಟ್ಟು ನೋಂದಾಯಿಸಿದ ನಂತರ ಆಕೆಯ ಊರಿಗೆ ಹೋಗಿರುತ್ತಾಳೆ. ವಿವಾದಿತ ದಾನ ಪತ್ರವನ್ನು ಬರೆದುಕೊಟ್ಟಿದ್ದಾಳೆ ಎನ್ನುವ ಪೂರ್ವದಲ್ಲಿ ವಾದಿಗೆ ಸರಕಾರಿ ಕಛೇರಿಗಳ, ಬ್ಯಾಂಕುಗಳ ಮತ್ತು ಉಪನೋಂದಣಾಧಿಕಾರಿಗಳ ಕಛೇರಿಯ ವ್ಯವಹಾರ ದಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ಗೊತ್ತಿಲ್ಲ.

23. ವಾದಿಯು ನನ್ನ ತಾಯಿ ಇರುವುದರಿಂದ ಮೊದಲಿಗೆ ಆಕೆಯು ಯಾವ ಯಾವ ವ್ಯವಹಾರಗಳನ್ನು ಮಾಡಿರುತ್ತಾಳೆ ಎಂದು ಗೊತ್ತಿರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯನ್ನು ಹೊರತುಪಡಿಸಿ ಅದನ್ನು ದಾನ ಮಾಡುವ ಪೂರ್ವದಲ್ಲಿ ಒಂದುವರೆ ಗುಂಟೆ ಆಸ್ತಿಯನ್ನು ವಾದಿಯಿಂದ ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಒಂದುವರೆ ಗುಂಟೆ ಆಸ್ತಿಯ ಸಂಃ4084/2. ಸದರಿ ಖರೀದಿ ಪತ್ರವು ನೋಂದಾಯಿತ ಖರೀದಿ ಪತ್ರವಾಗಿತ್ತು. ಸದರಿ ಖರೀದಿ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ಆಸ್ತಿಯನ್ನು ನನ್ನ ತಾಯಿ ನನಗೆ ಖರೀದಿಗೆ ಕೊಟ್ಟಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ವಾದಿಗೆ ಜೀವನ ಮಾಡಲು ಆದಾಯದ ಮೂಲಗಳು ಇರುವುದಿಲ್ಲ ಮತ್ತು ವೈಯಕ್ತಿಕ ಶಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆಕೆಯ ಜೀವನಕ್ಕೆ ಮಗಳ ಮೇಲೆ ಅವಲಂಬಿತವಾಗಿದ್ದಾಳೆ ಎಂದರೆ ಸರಿ. ಸದರಿ ಕಾರಣಗಳಿಗೆ ದಾವಾ ಆಸ್ತಿಯನ್ನು ನನಗೆ ಭಕ್ಷೀಸು ನೀಡುವ ಪ್ರಸಂಗ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಮೋಸ ಮಾಡಿ ಭಕ್ಷೀಸು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ